Mr. Speaker: We have not reached that stage. First, I should be satisfied by the document which you have supplied to my office. Give me some time to look into the document which you have given to me. Then we will take it up at an appropriate time.

ಶ್ರೀ ಎಸ್.ಬಂಗಾರಪ್ಪ : ತಾವು ಅಂತಿಮ ತೀರ್ಮಾನದ ಬಗ್ಗೆ ಹೇಳಿದ್ದೀರಿ. ಮಾನ್ಯ ಸದಸ್ಯರು ಕಳುಹಿಸಿರತಕ್ಕ ಹಕ್ಕುಚ್ಯುತಿ ನಿಲುವಿನ ವಿಚಾರದಲ್ಲಿ ತಾವು ಹೇಳಿದ್ದೀರಿ. ಅದೇನೋ ರಿಟ್ ಪಿಟಿಷನ್ ನಂಬರ್ಸ್ ಮತ್ತೊಂದರಲ್ಲಿ ಆಗಿರತಕ್ಕದ್ದು ಒಂದು ಮತ್ತು ಬೇರೆ ವಿಚಾರದ ಬಗ್ಗೆ ಪ್ರಸ್ತಾಪ ಆಗಿದೆ. ನಾನು ವಿವರವಾಗಿ ಇರತಕ್ಕ ಮಾತನ್ನು, ಹೇಳಿಕೆಯನ್ನು ಹೇಳಿದ್ದೇನೆ. ತಾವು ಇರಲಿಲ್ಲ. ಮಾನ್ಯ ಉಪಾಧ್ಯಕ್ಷಿಣಿಯವರು ಕುಳಿತಿದ್ದರು. ಅವರ ಅನುಮತಿ ಪಡೆದು ವಿವರಣೆಗಳನ್ನು ಈ ಸದನದ ಮುಂದೆ ಇಟ್ಟಿದ್ದೇನೆ. ಅದನ್ನು ನೋಡಿದರೆ ಸನ್ಮಾನ್ಯ ಸದಸ್ಯರಾದ ಯಡಿಯೂರಪ್ಪನವರೇ,ಇರತಕ್ಕ ಸಂಶಯ ನಿವಾರಣೆ ಆಗುತ್ತದೆ ಎಂದು ನನ್ನ ಭಾವನೆ. ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ಈ ವಿಚಾರ ತಂದಿದ್ದೇನೆ. ಆದ್ದರಿಂದ ನಾನು ನೋ ಕಾನ್ ಫಿಡೆನ್ಸ್ ಮೋಷನ್‌ಗೆ ಉತ್ತರ ಕೊಡುವ ವಿಚಾರದಲ್ಲಿ ಏನು ಸಂಶಯ ಉದ್ಭವ ಆಗಿದೆ, ಆ ನಂತರ ಕೊಟ್ಟಿರತಕ್ಕ ವಿವರಣೆಯಿಂದ ಅದು ಬಗೆಹರಿಯುತ್ತದೆ ಎಂದು ಭಾವಿಸಿದ್ದೆ. ನಾನು ಕೊಟ್ಟಿರತಕ್ಕ ವಿವರಣೆಯನ್ನು ಕೂಡ ಗಮನದಲ್ಲಿಟ್ಟುಕೊಂಡರೆ ಹಕ್ಕುಚ್ಯುತಿ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಅಧ್ಯಕ್ಷರು : ನೀವು ಏನು ಸ್ಟೇಟ್‌ಮೆಂಟ್ ಮಾಡಿದ್ದೀರಿ ಅದನ್ನೂ ನಾನು ನೋಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನುತಾವು ನೋಡಿ. ನಿನ್ನೆ ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಅವರು ಹೇಳಿರತಕ್ಕಂಥ ಸೆಂಟನ್ಸ್ ಏನು ಇದೆ ಎಂದರೆ.

"He further said the High Court had not'..

Mr. Speaker: I will not let you go into it. I will look into it.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ ಅವರು ಕ್ಲಾರಿಫೈ ಮಾಡುವ ಸಂದರ್ಭದಲ್ಲಿ ಇದರ ಬಗ್ಗೆ ಸಾಕಷ್ಟು ಗೊಂದಲ ತರುವಂತಹ ಒಂದು ಉತ್ತರವನ್ನು ಕೊಟ್ಟಿದ್ದಾರೆ. ನಿನ್ನೆ ಉತ್ತರ ಕೊಟ್ಟಿರುವುದು ಮತ್ತೆ ಪ್ರಿವಿಲೇಜ್ ಆಗುತ್ತದೆ.

ಅಧ್ಯಕ್ಷರು : ಅದನ್ನು ನಾನು ನೋಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಏಕೆಂದರೆ ಅವರು ಹೇಳಿದ್ದಾರೆ. ಹೈಕೋರ್ಟ್ ಸುಪ್ರೀಂ ಕೋರ್ಟ್ ಈ ತರಹ ಆದೇಶ ಕೊಟ್ಟಿಲ್ಲ ಎಂದು ಫರ್ದರ್ ಪ್ರಿವಿಲೇಜ್‌ಗೆ ಅವಕಾಶಮಾಡಿಕೊಟ್ಟಿದ್ದಾರೆ. ನನಗೆ ಏನು ಭಾವನೆ ಇದೆ ಎಂದರೆ ಇಲ್ಲಿ ಏನೋ ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ ಪ್ರಿವಿಲೇಜ್ ಮೋಷನ್ ಮೂವ್ ಮಾಡಿ ದೊಡ್ಡ ಸಾಧನೆ ಮಾಡುತ್ತೇನೆ ಎಂದಲ್ಲ. ಇವತ್ತು ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆಯುತ್ತಿದೆ.

Mr. Speaker : You are going into the merits. I will look into it.

ಶ್ರೀ ವಾಟಾಳ್ ನಾಗರಾಜ್ : ನಾನೂ ಸಹ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಟೆಲಿಫೋನ್ ಕದ್ದಾಲಿಕೆ ಹಾಗೂ ರಸಗೊಬ್ಬರದ ಬೆಲೆ ಏರಿಕೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಭಾಧ್ಯಕ್ಷರೆ, ಎರಡು ಪ್ರಮುಖವಾದಂತಹ ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಎರಡು ವಿಚಾರಗಳ ಬಗ್ಗೆ ತಮ್ಮ ನಿರ್ಣಯವನ್ನು ನಾವು ಕಾದಿದ್ದೇವೆ. ಒಂದು ಟೆಲಿಫೋನ್ ಕದ್ದಾಲಿಕೆ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅದನ್ನು ಚರ್ಚೆ ಮಾಡೋಣ, ಅವಕಾಶವನ್ನು ಮಾಡಿಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದೀರಿ. ಅಲ್ಪ ಸ್ವಲ್ಪ ನಮ್ಮಲ್ಲಿದ್ದಂಥ ದಾಖಲೆಗಳನ್ನು ತಮ್ಮ ಸ್ವಾಧೀನದಲ್ಲಿ ಒದಗಿಸಿದ್ದೇನೆ. ಆದರೆ ಇದುವರೆಗೆ ತಮ್ಮಿಂದ ನಾವು ನಿರೀಕ್ಷೆ ಮಾಡಿದಹಾಗೆ ನಮಗೆ ಉತ್ತರ ಬರಲಿಲ್ಲ. ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು ಎಂಬ ವಿಷಯ ಅಥವಾ ಇದು ಚರ್ಚೆಗೆ ಯೋಗ್ಯವಲ್ಲ ಎಂದಾದರೂ ತಾವುಗಳು ಹೇಳಬೇಕು. ಹಾಗಾಗಿ ಇದು ತಮ್ಮ ನಿರ್ಣಯದ ಮೇಲೆನಿಂತಿದೆ. ಹಾಗಾಗಿ ತಮ್ಮ ನಿರ್ಣಯವನ್ನು ನಾನು ನಿರೀಕ್ಷೆ ಮಾಡುತ್ತಿದ್ದೇನೆ. ಇದನ್ನು ಪುನಃ ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಎರಡನೆಯದು ಬಹಳ ಪ್ರಮುಖವಾದಂಥ ವಿಚಾರ, ರಸಗೊಬ್ಬರಗಳ ಬೆಲೆ ಏರಿಕೆ ವಿಚಾರದಲ್ಲಿ ಸಾಕಷ್ಟು ದೊಡ್ಡ ಪ್ರಕರಣ ಈ ಸದನದಲ್ಲಿ ನಡೆಯಿತು, ದಾಖಲೆಗಳು ಧರಣಿಗಳವರೆಗೆ ಮುಂದುವರಿದು, ಸಭಾ ನಾಯಕರು ಒಂದು ಸಲಹೆಯನ್ನು ಕೊಟ್ಟರು, ಈ ವಿಚಾರದಲ್ಲಿ ಏನು ಮಾಡಬೇಕೆಂಬ ಬಗ್ಗೆ ನಿರ್ಣಯವನ್ನು ಅಧ್ಯಕ್ಷರಿಗೆ ಬಿಟ್ಟುಕೊಡೋಣ ಎಂದರು ನಾವೆಲ್ಲರೂ ಸಂತೋಷದಿಂದ ಒಪ್ಪಿಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ತಾವುಗಳು ಈ ಬಗ್ಗೆ ಹೇಳುತ್ತೀರಿ ಎಂದು ನಾವು ಕಾದಿದ್ದೇವೆ. ನಿಮ್ಮ ವಿರುದ್ಧ ನಾವು ಧರಣಿ ಮಾಡುವ ಹಾಗಿಲ್ಲ ಇಂಥ ಒಂದು ಪರಿಸ್ಥಿತಿ.

ಶ್ರೀ ಸಿ. ಬೈರೇಗೌಡ : ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಆ ದಿವಸ ಧರಣಿ ಬಿಡಬೇಕಾಗಿದ್ದರೆ, ಮಾನ್ಯ ಮುಖ್ಯಮಂತ್ರಿಯವರು...

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಸಂಬಂಧಪಟ್ಟ ಹಾಗೆ ಹೇಳಿದ್ದೆ. ಡೆಲ್ಲಿಗೆ ಒಂದು ನಿಯೋಗ ಹೋಗಬೇಕೆಂದು ತೀರ್ಮಾನ ಮಾಡಿ ನಾವು ಸದನಕ್ಕೆ ಮಾತುಕೊಟ್ಟಿದ್ದೇವೆ. ಅದು ಉಂಟೋ ಇಲ್ಲವೋ ಎಂಬುದನ್ನು ತಿಳಿಸಬೇಕು. 3ನೇಯದು, ಮತ್ತೆ ಕಪ್ಪುಕಲ್ಲು ಶಿಲೆ ವಿಚಾರದಲ್ಲಿ ಇಲ್ಲಿ ದೀರ್ಘವಾಗಿ ಚರ್ಚೆಯಾಗಿದೆ. ಹೊರಗಡೆ ಇರತಕ್ಕಂಥ ಜನಕ್ಕೆ ಏನಪ್ಪಾ ಈ ವಿಚಾರದಲ್ಲಿ ಸರಕಾರಕ್ಕೂ ವಿರೋಧಪಕ್ಷದವರಿಗೂ ಏನಾದರೂ ಹೊಂದಾಣಿಕೆ ಆಗಿದೆಯೋ ಏನೋ ಎಂಬ ಮಾತು, ಹೊಂದಾಣಿಕೆ ಆಗಿದೆ ಎಂದು ನಾನು ಹೇಳಿದ್ದೇನೆ. ಏನು ಹೊಂದಾಣಿಕೆ ಅಂದರೆ ಅಧ್ಯಕ್ಷರಿಗೆ ಬಿಟ್ಟಿದ್ದೇವೆ, ಯಾವ ರೀತಿಯಲ್ಲಿ ಅದನ್ನು ಮುಂದುವರಿಸಬೇಕು ಅದಕ್ಕೆ ಸಮಿತಿಯನ್ನು ಮಾಡುತ್ತೀರೋ, ತನಿಖೆಯನ್ನು ಮಾಡುತ್ತೀರೋ? ಅದನ್ನು ಯಾವ ರೂಪದಲ್ಲಿ ಮಾಡಬೇಕೆಂಬುದನ್ನು ತಮಗೇ ಬಿಟ್ಟಿದ್ದೇವೆ. ಮುಖ್ಯಮಂತ್ರಿಗಳ ಉತ್ತರದ ಕೊನೆಯಲ್ಲಿ ನಾನು ನಿರೀಕ್ಷೆ ಮಾಡುತ್ತಾ ಇದ್ದೇನೆ. ಅವಿಶ್ವಾಸ ನಿರ್ಣಯ ಕೊನೆಯ ಘಟ್ಟವನ್ನು ಮುಟ್ಟಿದಾಗ ಮುಖ್ಯಮಂತ್ರಿಗಳಿಂದ ನಾನು ನಿರೀಕ್ಷೆ ಮಾಡುತ್ತಾ ಇದ್ದೆ. ಏನಾದರೂ ಒಂದು ಸೂಚನೆ ಬರಬಹುದು, ಆ ಸೂಚನೆ ಮೇರೆಗೆ ತಮ್ಮ ಕೊಠಡಿಯಲ್ಲಿ ಕುಳಿತು

ಚರ್ಚೆ ಮಾಡಿ, ನಿರ್ಣಯಕ್ಕೆ ಬರೋಣ ಎಂದು, ಆದರೆ ಇದುವರೆಗೆ ಅದರ ಬಗ್ಗೆ ನಿರ್ಣಯ ಬರಲಿಲ್ಲ, ಆದ್ದರಿಂದ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ, ಎರಡು

ಜವಾಬ್ದಾರಿಗಳನ್ನು ತಮ್ಮ ಮೇಲೆ ನಾವೇನು ಹೊರಿಸಿ ಬಿಟ್ಟಿದ್ದೇವೆ, ತಾವು ಹೊತ್ತು ಕೊಂಡಿದ್ದೀರೋ ಇಲ್ಲವೋ ನನಗೆ ಗೊತ್ತಾಗುತ್ತಾ ಇಲ್ಲ, ಹೊತ್ತು ಕೊಂಡಿದ್ದೀರಿ ಎಂದು ತಾವು ಆವೊತ್ತು ಏನಾದರೂ ಹೇಳಿದ್ದರೆ ಇವೊತ್ತು ನಮಗೆ ಕೇಳುವುದಕ್ಕೆ ಅವಕಾಶವಾಗುತ್ತ ಇತ್ತು. ಹೀಗೆ ಗಂಭೀರವಾಗಿ ಕುಳಿತುಕೊಂಡಿರುವುದರಿಂದ ಈಗ ಆ ಹೊರೆಯನ್ನು ತಾವುಗಳು ಏನಾದರೂ ಹೊತ್ತುಕೊಂಡಿದ್ದೀರೋ ಇಲ್ಲವೋ ಎಂದು ತಿಳಿಯಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಗೊಬ್ಬರದ ವಿಚಾರದಲ್ಲಿ ನಮ್ಮನ್ನು ಗೊಬ್ಬರಕ್ಕೆ ಹಾಕಿದರೋ ಅಥವಾ ನಮ್ಮನ್ನು ಡಿಲ್ಲಿಗೆ ಕರೆದುಕೊಂಡು ಹೋಗುತ್ತಾರೊ ಎಂದು ಅವರು ಹೇಳಬೇಕು.

ಶ್ರೀ ಸಿ. ಬೈರೇಗೌಡ : ಗೊಬ್ಬರದ ವಿಚಾರದಲ್ಲಿ ಇಲ್ಲಿ ನಾವೆಲ್ಲರೂ ಧರಣಿ ಕುಳಿತಿದ್ದಾಗ, ನಾವು ಒಂದು ನಿರ್ಣಯವನ್ನು ತಂದಿದ್ದೇವೆ. ಕೇಂದ್ರ ಸರಕಾರೇ ಮತ್ತು ರಾಜ್ಯ ಸರಕಾರ ಸೇರಿ, ಇಲ್ಲಿ ಸಣ್ಣ ರೈತರು, ಅತಿಸಣ್ಣ ರೈತರು ಅಥವಾ ದೊಡ್ಡ ರೈತರು ಎನ್ನತಕ್ಕಂಥ ವ್ಯತ್ಯಾಸವನ್ನು ಮಾಡದೇ ಹಳೆಯ ದರದಲ್ಲಿಯೇ ಗೊಬ್ಬರವನ್ನು ಕೊಡಬೇಕೆಂಬುದು ಅದರ ಸಾರಾಂಶ. ಅವರು ಆವೊತ್ತಿನ ದಿವಸ ಡೆಲ್ಲಿಗೆ ಹೋಗತಕ್ಕಂಥ ಕಾರ್ಯಕ್ರಮ ಇತ್ತು. ಕೊನೆಯಲ್ಲಿ ನಾವು ಏನು ಸಲಹೆಯನ್ನು ಕೊಟ್ಟಿದ್ದೇವೆ ಅಂದರೆ ಈ ವಿಚಾರವನ್ನು ಮತ್ತೆ ತೆಗೆದುಕೊಳ್ಳೋಣ ಮುಖ್ಯಮಂತ್ರಿಗಳು ಡೆಲ್ಲಿಗೆ ಹೋಗುತ್ತಾ ಇದ್ದಾರೆ, ಅವರು ಕೇಂದ್ರ ಸರಕಾರದ ಜೊತೆಗೆ ಮಾತುಕತೆ ನಡೆಸಿಕೊಂಡು ಬರಲಿ, ಅಲ್ಲಿ ಏನು ಹೇಳುತ್ತಾರೆ ಅದರ ಪ್ರತಿಫಲದ ಮೇಲೆ ನಾವು ಒಂದು ತೀರ್ಮಾನಕ್ಕೆ ಬರೋಣ ಎಂಬುದು ನಾವು ಕೊನೆಯ ಹಂತದ ವಿಚಾರ.ಡೆಲ್ಲಿಗೆ ಹೋಗಿ ಬಂದಿದ್ದು ಆಗಿದೆ, ಇಲ್ಲಿಯವರೆಗೂ ಅವರು ಆ ವಿಚಾರದ ಬಗ್ಗೆ ಹೇಳಿಲ್ಲ. ಈಗಲಾದರೂ ಕೂಡ ಗೊಬ್ಬರದ ವಿಚಾರದಲ್ಲಿ ನಿಮ್ಮ ನಿಲುವು ಏನು ನಮ್ಮ ನಿರ್ಣಯಕ್ಕೆ ನಿಮಗೆ ಒಪ್ಪಿಗೆ ಇದೆಯೋ ಇಲ್ಲವೋ, ಏಕೆಂದರೆ ಆ ನಿರ್ಣಯ ಹಾಗೆಯೇ ಇದೆ, ಮತಕ್ಕೆ ಕೂಡ ಹಾಕಿಲ್ಲ, ನೀವು ಒಪ್ಪುತ್ತೀರೋ ಬಿಡುತ್ತೀರೋ ಆ ವಿಚಾರ ಬೇರೆ ಅದರೆ ನಮ್ಮ ನಿರ್ಣಯ ಮಾತ್ರ ಮತಕ್ಕೆ ಹಾಕತಕ್ಕಂಥಾದ್ದು ಸೂಕ್ತ ಎಂದು ನಮಗನ್ನಿಸುತ್ತದೆ ಆದ್ದರಿಂದ ಮಾನ್ಯ ಅಧ್ಯಕ್ಷರು ಇವೊತ್ತು ಅಲ್ಲದಿದ್ದರೂ ಇನ್ನೊಂದು ದಿವಸ ಆ ನಿರ್ಣಯದ ಬಗ್ಗೆ ಆ ಸಭೆ ತೀರ್ಮಾನ ಕೈಗೊಳ್ಳಲು ಅವಕಾಶವನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಪ್ರಾಮುಖ್ಯವಾದಂಥ ಎರಡು ವಿಚಾರಗಳ ಬಗ್ಗೆ ಧರಣಿನಡೆಯಿತು. ಆ ಎರಡೂ ವಿಚಾರಗಳ ಬಗ್ಗೆ ಇನ್ನೂ ಸರಕಾರದ ಕಡೆಯಿಂದ ಸಮರ್ಪಕವಾದ ಉತ್ತರ ಬಂದಿಲ್ಲ. ಮಾನ್ಯ ಮುಖ್ಯಮಂತ್ರಿಯವರು ನಮ್ಮ ಜೊತೆಯಲ್ಲಿ ಮಾತನಾಡಬೇಕಾಗಿತೆ ನೀವು ಬನ್ನಿ ಎಂದು ಕರೆದು ಎಲ್ಲಾ ವಿರೋಧಪಕ್ಷದ ಮುಖಂಡರುಗಳ ಜೊತೆಯಲ್ಲಿ ಮಾತುಕತೆ ನಡೆಸಿ ಅಂತಿಮವಾಗಿ ಒಂದು ತೀರ್ಮಾನಕ್ಕೆ ಬಂದಿದ್ದಾರೆ.

ಇಷ್ಟು ಹೊತ್ತಿಗಾಗಲೇ ಎರಡು ಮೂರು ಬಾರಿ ತಾವು ದೆಹಲಿಗೆ ಹೋಗಿಬಂದಿದ್ದೀರಿ. ಸರ್ವಪಕ್ಷನಿಯೋಗ ಹೋಗುವ ವಿಚಾರ ಏನಾಯಿತು ಅದು ನಿಮ್ಮ ತೀರ್ಮಾನವೇ? ಎರಡನೆಯದು, ರಸಗೊಬ್ಬರದ ಬಗ್ಗೆ ಸರ್ಕಾರದ ನೀತಿಯೇನು? ಕೇಂದ್ರ ಸರ್ಕಾರದ ಜತೆ ಮಾತುಕತೆ ಆಡಿದ್ದೀರಾ? ಏನು ಪ್ರಯತ್ನ ಮಾಡಿದ್ದೀರಿ. ಅದನ್ನೆಲ್ಲ ಸಭೆಯ ಮುಂದೆ ಹೇಳಬೇಕು. ಇಂದು ಬೆಳಿಗ್ಗೆ ಮಾನ್ಯ ಅಧ್ಯಕ್ಷರನ್ನೂ ಭೇಟಿ ಮಾಡಿದ್ದೆ ನಾನು. ಕಲ್ಲುಗಣಿಗಳ ಬಗ್ಗೆ ಎರಡು ದಿವಸ ಧರಣಿಯಾಗಿದೆ. ಈ ಬಗ್ಗೆ ಸದನದ ಸಮಿತಿ ಮಾಡುತ್ತೇವೆಂದು ನಿರಂತರವಾಗಾ ತಮ್ಮ ಮಧ್ಯಸ್ಥಿತಿಕೆ ವಹಿಸಿದ್ದುದರಿಂದ ತಮ್ಮ

ಮೇಲೆ ಜವಾಬ್ದಾರಿ ಬಿಟ್ಟಿದ್ದರಿಂದ ನಾವು ಧರಣಿಯನ್ನು ಕೈಬಿಡಬೇಕಾಯಿತು. ಅದು ಏನೂ ಆಗಲಿಲ್ಲ ಎಂದರೆ ಮತ್ತೆ ನಾವು ಧರಣಿ ಕುಳಿತುಕೊಳ್ಳುವ ಸ್ಥಿತಿಯಲ್ಲಿದ್ದೇವೆ. ನೀವು ಏನೂ ಮಾಡಲಿಲ್ಲ ಎಂದರೆ ಹೇಗೆ? ಆದ್ದರಿಂದ ಅಧ್ಯಕ್ಷರು ಏನಾದರೂ ದಾರಿ ತೋರಿಸಬೇಕು ಇಲ್ಲದಿದ್ದರೆ ನಮಗೆ ಧರಣಿ ಮಾಡಲು ಅವಕಾಶ ಮಾಡಿಕೊಡಬೇಕು, ಇಲ್ಲದಿದ್ದರೆ ಧರಣಿ ಕೈಬಿಡುವುದಕ್ಕಾದರೂ ಮಾರ್ಗದರ್ಶನ ಮಾಡಬೇಕು ಏಕೆಂದರೆ ಇದು ಪ್ರಾಮುಖ್ಯವಾದುದು.

ಅಧ್ಯಕ್ಷರು: ವಾಟಾಳರೇ ಮಾರ್ಗದರ್ಶನ ಕೇಳುತ್ತಿದ್ದೀರಾ ನಾನು ತೋರಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ದಯವಿಟ್ಟು ಬೇಗನೆ ತೋರಿ ಸ್ವಾಮಿ. ಈ ಸಭೆ ಏಳುವುದರೊಳಗೆ ತೋರಿಸಿ. ಎರಡು ದಿನಗಳ ಧರಣಿ ನಡೆದಿದೆ, ಕಲ್ಲು ಲೂಟಿ ನಿಲ್ಲಿಸುವುದಕ್ಕೆ ಏನು ಮಾಡಲಾಗಿದೆ ಎಂದು ಗಹನವಾಗಿ ಚರ್ಚೆ ನಡೆದಿದೆ. ಇದ ಗೋಪ್ಯವಾಗಿಬಿಟ್ಟರೆ ಹೇಗೆ? ಏನಾದರೂ ದಾರಿಗೆ ಬರಬೇಕಲ್ಲವೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ತಮ್ಮ ಕೊಠಡಿಯಲ್ಲಿ ಸಭಾನಾಯಕರ ಜೊತೆ ಮಾತನಾಡುವ ಸಂದರ್ಭದಲ್ಲಿ ಗ್ರಾನೈಟ್ ಬಗ್ಗೆ ಸಭಾನಾಯಕರು ಉತ್ತರ ಕೊಡಬೇಕು ನಂತರ ತಾವು ಅದರ ಬಗ್ಗೆ ವಿಚಾರ ಮಾಡಿ, ಆ ಪ್ರಕಾರ ಈ ವೇಳೆಗಾಗಲೇ ಸದನದ ಸಮಿತಿ ಘೋಷಣೆ ಮಾಡುತ್ತೀರೆಂದು ನಾವು ಭಾವಿಸಿದ್ದೇವು. ತಾಂತ್ರಿಕ ಕಾರಣಗಳಿಂದ ಬಹುಶಃ ಅದು ತಡವಾಗಿರಬಹುದು ಆದಷ್ಟು ಬೇಗ ಈ ಗ್ರಾನೈಟ್ ಬಗ್ಗೆ ರಾಜ್ಯದ ಜನ ಕಾತರರಾಗಿರುವುದರಿಂದ ಸದನದ ಸಮಿತಿ ಮಾಡಬೇಕೆಂದಿದ್ದರೆ ಅದನ್ನು ಅನೌನ್ಸ್ ಮಾಡುವುದು ಒಳ್ಳೆಯದು.

ಎರಡನೆಯದು, ರಸಗೊಬ್ಬರದ ಬೆಲೆ ಶೇಕಡ 40ರಷ್ಟು ಏರಿಯಾಗಿರುವ ಹಿನ್ನಲೆಯಲ್ಲಿ ಈಗಾಗಲೇ ನಾವು ರೆಸಲ್ಯೂಷನ್ ಮೂವ್ ಮಾಡಿದ್ದೇವೆ. ಅದರ ಬಗ್ಗೆ ವೋಟಿಗೆ ಪ್ರೆಸ್ ಮಾಡಬೇಕೆಂಬ ತೀರ್ಮಾನವೂ ಇದೆ. ಇಲ್ಲದಿದ್ದರೆ ಬೆಲೆ ಜಾಸ್ತಿಯಾಗಿರುವ ಬಗ್ಗೆ ಗೊಂದಲವಿರುವುದರಿಂದ ಪ್ರಧಾನಿಗಳ ಬಳಿಗೆ ಒಂದು ನಿಯೋಗ ಹೋಗಬಹುದೆಂದು ಹೇಳಿದರ ಬಗ್ಗೆ ಪ್ರಸ್ತಾವವಾಗಿಲ್ಲ, ಅದಕ್ಕಾಗಿ ನಾವು ರೆಸಲ್ಯೂಷನ್ ಮೂವ್ ಮಾಡಲು ಅವಕಾಶ ಮಾಡಿಕೊಡಿ ಮತ್ತು ವೋಟಿಗೆ ಪ್ರೆಸ್ ಮಾಡಲೂ ನಾವು ಇಷ್ಟ ಪಡುತ್ತೇವೆ.

ಶ್ರೀ ಜೀವರಾಜ ಆಳ್ವ : ಒಂದು ಸಲಹೆ ಕೊಡುತ್ತೇನೆ, ಈ ವಿಚಾದಲ್ಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ರಸಗೊಬ್ಬರದ ಬಗ್ಗೆ ಸರ್ಕಾರದ ನಿಲುವು ಇನ್ನೂ ಹೇಳಲಿಲ್ಲ. ಇಲ್ಲದಿದ್ದರೆ ಈ ನಿರ್ಣಯ ಜೀವಂತವಾಗಿದೆ ಅದನ್ನು ಮತದಾನಕ್ಕೆ ಹಾಕಿ ಅಥವಾ ನಾವು ಮಾತನಾಡಿದ ಪ್ರಕಾರ ಸರ್ಕಾರದ ನಿರ್ಧಾರವೇನು ಸುಮ್ಮನೆ ಆಕಾಶ ತೋರಿಸಿದರೆ ಆಗುವುದಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ : ಅಧ್ಯಕ್ಷರೇ, ನಾಳೆ ಗೌರಿಹಬ್ಬ ಇದೆ, ವಿಧಾನ ಸಭೆ ಇದೆಯೋ ಇಲ್ಲವೋ ಗೊತ್ತಿಲ್ಲ, ಲೋಕಸಭೆಗೂ ಕೂಡ ರಜಾ ಕೊಟ್ಟಿದ್ದಾರೆ.

ಅಧ್ಯಕ್ಷರು : ಈಗ ಗೌರಿ ತೆಗೆದುಕೊಳ್ಳೋಣವೋ, ಅಥವಾ ರಸಗೊಬ್ಬರ ತೆಗೆದುಕೊಳ್ಳೋಣವೋ?

ಶ್ರೀ ವಾಟಾಳ್ ನಾಗರಾಜ್ : ಗೊಬ್ಬರ ಮೊದಲು ತೆಗೆದುಕೊಳ್ಳಿ, ಗೌರಿಗಣೇಶರು ಎಲ್ಲಿಗೆ ಹೋಗುವುದಿಲ್ಲ, ಭದ್ರವಾಗಿ ಇರುತ್ತಾರೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಗೊಬ್ಬರದ ಮೇಲೆ ಬಹಳ ರಸವತ್ತಾಗಿ ಮತ್ತೆ ವ್ಯಾಖ್ಯಾನಗಳು ನಡೆಯುತ್ತಿದೆ. ನನಗೆ ಸುಮ್ಮನೆ ನೆನಪಿಗೆ ಬಂತು, 'ಗೊಬ್ಬರ' ಎನ್ನತಕ್ಕಂಥ ಒಂದು ಕವನ ಇದೆ. ಗೊಬ್ಬರದ ಮೇಲೆ ಕುವೆಂಪುರವರು ಕವನವನ್ನು ಬರೆದಿದ್ದಾರೆ. ಗೊಬ್ಬರದ ಮೇಲೆ ಕಬ್ಬಮಂ ಬರೆಯುವುದೇ ಎಂದು ಹೇಳಿ ಪ್ರಾರಂಭ ಮಾಡುತ್ತಾರೆ.' ಕೋಗಿಲೆ ಮತ್ತು ಸೋವಿಯತ್ ರಷ್ಯಾ' ಎಂಬ ಪುಸ್ತಕದಲ್ಲಿ ಅದು ಬರುತ್ತದೆ. ನನಗೆ ಸುಮ್ಮನೆ ನೆನಪಿಗೆ ಬಂತು. ಅದನ್ನು ಹಾಗೆಯೇ ಬಿಟ್ಟರೆ ಗೊಬ್ಬರದ ಮೇಲೆ ಬಹಳ ರಸವತ್ತಾಗಿ ಕವನದ ರಚನೆ ಈಗ ಪ್ರಾರಂಭವಾಗಬಹುದು.

ಶ್ರೀ ವಾಟಾಳ್ ನಾಗರಾಜ್ : ತಾವು ಕವನವನ್ನು ರಚನೆ ಮಾಡುವುದು, ನಾವು ಸಂಗೀತ ಹೇಳುವುದರಿಂದ, ಆದರಿಂದ ಏನೂ ಗೊಬ್ಬರ ಸಿಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ : ಸುಮ್ಮನೆ ನೆನಪಿಗೆ ಬಂತು. ಅದು ಏನೇ ಇರಲಿ. ರಸಗೊಬ್ಬರದ ವಿಚಾರದಲ್ಲಿ ತಾವು ವಿಚಾರವನ್ನು ಮಾಡಿದಾಗ ಸರ್ಕಾರದ ಪರವಾಗಿ ನಮ್ಮ ಹೇಳಿಕೆಗಳನ್ನು ಕೂಡ ಬಹಳ ರಸವತ್ತಾಗಿ ನಾವು ಕೊಟ್ಟಿದ್ದೇವೆ. ವಾಸ್ತವಾಂಶಗಳ ಆಧಾರದ ಮೇಲೆ ವಿವರಗಳಿಗೆ ಹೋಗದೆ ಈ ಸಂದರ್ಭದಲ್ಲಿ ಎಲ್ಲಾ ಪಕ್ಷಗಳ ಸದಸ್ಯರುಗಳು ಇರತಕ್ಕಂಥ ಒಂದು ನಿಯೋಗ ಹೋಗಬೇಕಾಗಿದೆ. ಆ ಸದನವನ್ನು ಕೂಡ ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ದೆಹಲಿಗೆ ನಿಯೋಗಹೋಗಬೇಕು. ಪ್ರಧಾನಮಂತ್ರಿಯವರನ್ನು ಮತ್ತು ಸಂಬಂಧಪಟ್ಟಿರತಕ್ಕಂಥ ಸಚಿವರನ್ನು ಭೇಟಿ ಮಾಡತಕ್ಕಂಥ ಉದ್ದೇಶ ಇಟ್ಟು ಎನ್ನತಕ್ಕಂಥ ವಿಚಾರದ ಬಂದಾಗ ಅದಕ್ಕೆ ನಾವು ಒಪ್ಪಿಗೆಯನ್ನು ಕೂಡ ಕೊಟ್ಟಿದ್ದೇವೆ. ಇಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿಲ್ಲ ಆದರೆ ತಾವು ಏನು ಮಾಡಿದ್ದೀರಿ ಎಂದರೆ ಆವತ್ತು ಮಾತನಾಡುತ್ತಾ ತಾವು ಸದನವನ್ನು ಬಿಟ್ಟು ಹೊರಗಡೆ ಹೋಗಿರತಕ್ಕಂಥದ್ದು ಸ್ವಲ್ಪ ನೆನಪು. ಆವತ್ತು ಸಭೆ ಅಡ್ಜರ್ನ್ ಆಗಿರಲಿಲ್ಲ. ತಾವು ಹೊರಗಡೆ ಹೋದಿರಿ. ನನಗೆ ಗೊತ್ತಿರುವ ಹಾಗೆ. Of course subject to verification ಸರಿ, ತಾವು ಹೋದಮೇಲೆ ಇನ್ನೇನು ಮಾಡುವುದಕ್ಕಾಗುವುದಿಲ್ಲ, ವ್ಯಾಖ್ಯಾನವನ್ನು ಮಾಡುತ್ತಾ ಮಾಡುತ್ತಾ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಬೇರೆ ಮಿತ್ರರುಗಳು ಕೂಡ ಹೋಗುತ್ತಿದ್ದರು. ಇದೇನು ಇದೆಯೋ ಇಲ್ಲವೋ ಎನ್ನುವ ಅನುಮಾನ ನನಗೆ ಬಂದು ನಾನು ಕುಳಿತುಕೊಂಡೆ. ಆದರೂ ಕೂಡ ಇದರ ಬಗ್ಗೆ ವ್ಯಾಖ್ಯಾನ ಬೇಕಾಗಿಲ್ಲ. ಈಗಲೂ ಕೂಡ ಸರ್ವಪಕ್ಷಗಳ ಮತ್ತು ಎರಡೂ ಸದನಗಳ ಘಾನ್ಯ ಸದಸ್ಯರುಗಳನ್ನೊಳಗೊಂಡಂತೆ ನಿಯೋಗವನ್ನು ತೆಗೆದುಕೊಂಡು ಹೋಗುವುದಕ್ಕೆ ನಾನು ಸಿದ್ದನಾಗಿದ್ದೇನೆ.

ನನ್ನ ನಾಯಕತ್ವ ಇರಲಿ ಎಂದು ತಾವು ಹೇಳುತ್ತಿದ್ದೀರಿ, ಸಭಾನಾಯಕರ ನಾಯಕತ್ವ ಇರಲಿ ಬಿಡಲಿ ಒಟ್ಟಿನಲ್ಲಿ ಎಲ್ಲರೂ ಹೋಗಿ ಸರ್ವಸಮಾನವಾಗಿ ಮಾತನಾಡಬೇಕಾಗುತ್ತದೆ. ಈ ಒಂದು ವಿಚಾರವನ್ನು ಪ್ರಧಾನ ಮಂತ್ರಿ ಮತ್ತು ಬೇರೆಯವರ ಮುಂದೆ ಇದನ್ನು ಇರಬೇಕಾಗುತ್ತದೆ. ಈಗಲೂ ಕೂಡ ಸಿದ್ಧನಾಗಿದ್ದೇನೆ. ಆದುದರಿಂದ ತಾವು ಮತ್ತು ಆ ಸದನದ ಅಧ್ಯಕ್ಷರು...

ಶ್ರೀ ಡಿ.ಬಿ. ಚಂದ್ರೇಗೌಡ : ಸಂಸತ್ ಅಧಿವೇಶನ 16ನೇ ತಾರೀಖು. ಅದು ಆದಮೇಲೆ ಹೋಗಿ ಏನು ಪ್ರಯೋಜನ? ಅಧಿವೇಶನ ಇದ್ದಾಗ ಹೋಗಿ ಹೇಳಿದರೆ ಅವರು ಏನಾದರೂ ಮಾಡುವುದಕ್ಕೂ ಸಾಧ್ಯವಾಗುತ್ತದೆ. ಯಾರನ್ನೋ ಸಮಾಧಾನ ಮಾಡುವುದಕ್ಕೆ ಈ ರೀತಿ ಮಾಡಬಾರದು. ಆ ಕಾರಣಕ್ಕಾಗಿ ನಿಮಗೆ ಹೇಳಿದೆ.

ಶ್ರೀ ಎಸ್. ಬಂಗಾರಪ್ಪ : ತಮಗೆ ಗೊತ್ತಿರುವ ಹಾಗೆ ಹಬ್ಬಕ್ಕೋಸ್ಕರ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಊರುಗಳಿಗೆ ಹೋಗುತ್ತಿದ್ದಾರೆ. ಅದು ತಮಗೆ ಗೊತ್ತಿದೆ. ಜೊತೆಗೆ ಸಂಸತ್ ಸದಸ್ಯರುಗಳ ಹತ್ತಿರ ಮಾತನಾಡುವುದಕ್ಕೆ ಹೋಗುತ್ತಿಲ್ಲ. ಪ್ರಧಾನಮಂತ್ರಿಗಳು ಸಿಕ್ಕೇ ಸಿಗುತ್ತಾರೆ. ಅವರ ಕಾಲವನ್ನು ತಿಳಿದುಕೊಳ್ಳೋಣ. ಹಣಕಾಸಿನ ಸಚಿವರನ್ನು ನಾವು ಕಾಣಬೇಕಾಗಿದೆ. ಮತ್ತು ಕೃಷಿ ಸಚಿವರಾದ ಜಾಕಡ್ ಅವರನ್ನು ಭೇಟಿ ಮಾಡತಕ್ಕಂಥ ಸಂದರ್ಭ ಬರುತ್ತದೆ. ಮುಖ್ಯವಾಗಿ ಹೇಳತಕ್ಕಂಥದ್ದು ಈ ಮೂರು ಜನರೂ ಎಂದು ನನ್ನ ಭಾವನೆ. ಮತ್ತೆ ಯಾರಾದರೂ ಇದ್ದರೆ ಭೇಟಿ ಮಾಡತಕ್ಕಂಥ ವಿಚಾರವನ್ನು ಇಟ್ಟುಕೊಳ್ಳೋಣ.ಯಾರು ಹೋಗಬೇಕು ಎನ್ನತಕ್ಕಂಥ ಪಟ್ಟಿ ತಯಾರು ಮಾಡುವುದು ಅಧ್ಯಕ್ಷರ ಅನುಮತಿಯನ್ನು ಪಡೆಯುವುದು, ಆ ಸದನದ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರುಗಳ ಅಭಿಪ್ರಾಯ, ಅಧ್ಯಕ್ಷರ ಅಭಿಪ್ರಾಯವನ್ನು ನಾವು ತೆಗೆದುಕೊಳ್ಳಲೇ ಬೇಕಾಗುತ್ತದೆ. ಪಟ್ಟಿಯನ್ನು ತಯಾರು ಮಾಡಿ ತಾರೀಖನ್ನು ನಿಗದಿ ಮಾಡತಕ್ಕಂಥದ್ದು, ಪ್ರಧಾನಮಂತ್ರಿಗಳು ಯಾವಾಗ ಇರುತ್ತಾರೆ ಎನ್ನತಕ್ಕಂಥ ವಿಚಾರವನ್ನು ಕೂಡ ದೂರವಾಣಿ ಮುಖಾಂತರ ನಾವು ನಾವು ಸಂಪರ್ಕ ಬೆಳಿಸಿ ಅದನ್ನು ಕೂಡ ತಿಳಿದುಕೊಳ್ಳೋಣ. ಅದನ್ನು ತಿಳಿದುಕೊಂಡು ನಾವು ಎಂದು ಹೋಗಬೇಕು ಎಂಬುದನ್ನು ನಿಗದಿ ಮಾಡೋಣ. ಇದರ ಬಗ್ಗೆ ಚರ್ಚೆ ಬೇಕಾಗಿಲ್ಲ. ಇದರ ಬಗ್ಗೆ ನನ್ನ ಒಪ್ಪಿಗೆ ಇದೆ. ಇದು ಡಿಸಿಷನ್ ನಂಬರ್ 1. ಇದರ ಬಗ್ಗೆ ಅನುಮಾನ ಬೇಡ ಎಂದು ನಾನು ಭಾವಿಸಿದ್ದೇನೆ. ಎರಡನೇಯ ವಿಚಾರ ತಾವು ಧರಣಿಯನ್ನು ಮಾಡುತ್ತಿರತಕ್ಕಂಥ ಕಾಲದಲ್ಲಿ ಗ್ರಾನೈಟ್ ಬಗ್ಗೆ ನಾವು ಮಾನ್ಯ ಅಧ್ಯಕ್ಷರ ಕೊಠಡಿ ಒಳಗಡೆ ಮಾತುಕತೆಯನ್ನು ಮಾಡಿದ್ದೇವೆ. ಇದರ ಬಗ್ಗೆ ಇಲ್ಲ ಎನ್ನತಕ್ಕಂಥ ಚರ್ಚೆಯನ್ನು ಮತ್ತೆ ಮಾಡಬಾರದು. ಅನಂತರ ಈ ವಿಚಾರದಲ್ಲಿ ಅಧ್ಯಕ್ಷರನ್ನು ನಾವು ಯಾವುದಕ್ಕೂ ಪಾರ್ಟಿ ಮಾಡಬಾರದು ಎನ್ನತಕ್ಕಂಥ ಮಾತನ್ನು ನಾನು ಹೇಳಿದ್ದೇನೆ. ಏನೇ ಇದ್ದರೂ ನಂಬಿಕೆ ಇಟ್ಟು ಅದನ್ನು ಅಧ್ಯಕ್ಷರಿಗೆ ಬಿಡೋಣ ಎಂದೂ ಹೇಳಿದ್ದೇವೆ. ಏತಕ್ಕೆ ನಾವು ಆ ಮಾತನ್ನು ಆಡಿದ್ದೇವೆ ಎಂಬುದು ತಮಗೂ ಕೂಡ ಗೊತ್ತಿದೆ. ಇದರ ಬಗ್ಗೆ ಮತ್ತೆ ಚರ್ಚೆಯನ್ನು ಮಾಡುವುದು ಬೇಡ. ಆ ಸದನ ನಾವು ಪ್ರಾರಂಭ ಮಾಡಿದಾಗ ಈ ಸದನ ಇನ್ನೂ ಸೇರಿರಲಿಲ್ಲ. ಇದು ಚರ್ಚೆಯಾದಂಥ ಸಂದರ್ಭದಲ್ಲಿ, ಈಗ ಆ ಸದನ ಇದೆ. ಆದುದರಿಂದ ಅಲ್ಲಿಯ ಅಧ್ಯಕ್ಷರು, ಅಲ್ಲಿಯ ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಮಾತನಾಡಿ ಅದನ್ನು ಏನು ಮಾಡಬೇಕು ಎಂಬುದರ ಬಗ್ಗೆ ತೀರ್ಮಾನವನ್ನು ಮಾಡೋಣ.

ಅನಂತರ ನಮ್ಮ ತೀರ್ಮಾನ ಏನು ಆಗಿದೆ ಎಂಬುದನ್ನು ಪ್ರಕಟ ಮಾಡೋಣ, ಅದರ ಬಗ್ಗೆ ಚರ್ಚೆ ಮಾಡುವುದು ಬೇಡ. ಅಧ್ಯಕ್ಷರಿಗೆ ಬಿಟ್ಟಿದ್ದೇವೆ. ಮತ್ತೆ ಏಕೆ ಚರ್ಚೆ ಮಾಡುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಚರ್ಚೆಗೆ ಹೋಗಿಲ್ಲ, ತಾವು ಬೇಗ ಅದಕ್ಕೆ ದಾರಿತೋರಿಸಿ.

ಶ್ರೀ ಎಸ್. ಬಂಗಾರಪ್ಪ : ನಿಮಗೆ ಬೇಗ ದಾರಿಯನ್ನು ತೋರಿಸಬೇಕೆಂಬುದೇ ನನ್ನ ಆಸೆ.

ಶ್ರೀ ಬಾಬುಗೌಡ ರುದ್ರಗೌಡ ಪಾಟೀಲ್ : ತಡ ಮಾಡಿದರೆ ಪ್ರಯೋಜನವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಮಗೆ ಗ್ರಾನೈಟ್ ಬಗ್ಗೆ ದಾರಿತೋರಿಸಿ. ಮಿಕ್ಕಬಗ್ಗೆ ಎಲ್ಲಾ ನಮಗೆ ದಾರಿಗೊತ್ತಿದೆ. ಗ್ರಾನೈಟ್ ಬಗ್ಗೆ ಸರ್ಕಾರ ದಾರಿ ತಪ್ಪಿದೆ, ಅದಕ್ಕೆ ಒಳ್ಳೆಯದಾರಿಯನ್ನು ತೋರಿಸಿ ಎಂದು ಹೇಳುತ್ತಿದ್ದೇನೆ

ಶ್ರೀ ಎಸ್. ಬಂಗಾರಪ್ಪ : ತಾವು ಇರಬೇಕು.

ಶ್ರೀ ವಾಟಾಳ್ ನಾಗರಾಜ್ : ನಾನು ಇರುತ್ತೇವೆ. ತಮ್ಮ ದಾರಿಯನ್ನು ಗ್ರಾನೈಟ್ ಬಗ್ಗೆ ತಪ್ಪಿದ್ದೀರಾ? ಅದನ್ನು ಸರಿಮಾಡಿಕೊಳ್ಳುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿ.

ಶ್ರೀ ಎಸ್. ಬಂಗಾರಪ್ಪ : ಗ್ರಾನೈಟ್ ದಾರಿಯನ್ನು ನಾವು ತಪ್ಪಿದ್ದಲ್ಲ. ತಪ್ಪಿದ್ದನ್ನು ರಿಪೇರಿ ಮಾಡಿದ್ದೇವೆಂದು ನಾನು ಹೇಳಿದ್ದೇನೆ. ಇನ್ನೇನು ನಾವು ಹೇಳುವುದು.

ಶ್ರೀ ಬಾಬುಗೌಡ ರುದ್ರಗೌಡ ಪಾಟೀಲ್ : ತಾತ್ಕಾಲಿಕವಾಗಿಯಾದರೂ ಗೊಬ್ಬರವನ್ನು ಯಾವರೀತಿ ವಿತರಣೆ ಮಾಡುತ್ತೀರೆಂಬುದನ್ನು ಹೇಳಬೇಕು. ಕೇಂದ್ರ ಸರ್ಕಾರದಿಂದ 8 ಕೋಟಿ ರೂಪಾಯಿಯ ಸಬ್ಸಿಡಿ ಬಂದಿದೆ ಎಂದು ಹೇಳುತ್ತಿದ್ದೀರಿ. ರೈತರ ಹಿಂಗಾರಿನಲ್ಲಿ ಬಿತ್ತಲಿಕ್ಕೆ ಪ್ರಾರಂಭ ಮಾಡಿದ್ದಾರೆ. ತಾತ್ಕಾಲಿಕವಾಗಿ ಅದಕ್ಕೆ ಗೊಬ್ಬರವನ್ನು ಯಾವ ರೀತಿ ವಿತರಣೆ ಮಾಡುತ್ತೀರೆಂಬುದನ್ನಾದರೂ ಹೇಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ಗೋಡೌನ್‌ನಲ್ಲಿ ಸರ್ಕಾರದ್ದು 50 ಸಾವಿರ ಟನ್ ಗೊಬ್ಬರ ಇತ್ತೆಂದು ಹೇಳಿದಿರಿ. ಅದನ್ನು ಯಾವಾಗಲಿಂದ ವಿತರಣೆ ಮಾಡುತ್ತಿದ್ದೀರಿ, ಯಾವ ರೇಟ್‌ನಲ್ಲಿ ವಿತರಣೆಯನ್ನು ಮಾಡುತ್ತಿದ್ದೀರಿ, ಅದರ ಬಗ್ಗೆ ಸರ್ಕಾರ ಯಾವ ನಿರ್ಧಾರವನ್ನು ಕೈಗೊಂಡಿದೆ ಎಂದು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ : ಕೇಂದ್ರ ಸರ್ಕಾರದಿಂದ ಮತ್ತೆ ನಮಗೇನಾದರೂ ಈ ರೀತಿ ಮಾಡಬೇಕೆಂದು ವಿವರಗಳು ಬಂದಿದ್ದರೆ, ಅದನ್ನು ನಾವು ಮುಚ್ಚಿಡುವುದಕ್ಕೆ ನಮಗೇನು ಆಸೆ ಇಲ್ಲ. ಬಂದಿರತಕ್ಕದ್ದನ್ನು ಸದನಕ್ಕೆ ಹೇಳತಕ್ಕದ್ದು ನಮ್ಮ ಕರ್ತವ್ಯವಾಗಿದೆ. ಮಾನ್ಯ ಕೃಷಿ ಸಚಿವರು ಇಲ್ಲಿದ್ದಾರೆ. ಅದರ ವಿವರಗಳನ್ನು ಅವರು ಪಡೆದು ಈ ಸದನಕ್ಕೆ ಹೇಳುತ್ತಾರೆ ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ಸಿ. ಬೈರೇಗೌಡ : ಈಗ ಸಣ್ಣ ಮತ್ತು ಅತಿ ಸಣ್ಣ ರೈತರಿಗೂ ಗೊಬ್ಬರ ಸಿಕ್ಕುತ್ತಿಲ್ಲ ಯಾರಿಗೂ ಗೊಬ್ಬರ ಸಿಕ್ಕುತ್ತಿಲ್ಲ.

ಅಧ್ಯಕ್ಷರು : ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ ಬಿಡಿ.

ಶ್ರೀ ಸಿ. ಬೈರೇಗೌಡ : ಕಾರಣವೇನೆಂದರೆ ಆ ಕ್ಲಾಸಿಫಿಕೇಷನ್ ಇನ್ನೂ ಇಷ್ಯೂ ಆಗಿಲ್ಲ. ಯಾರಿಗೂ ಇವತ್ತಿನ ದಿವಸ ಗೊಬ್ಬರ ಸಿಕ್ಕುತ್ತಿಲ್ಲ.

ಅಧ್ಯಕ್ಷರು : ಅಗ್ರಿಕಲ್ಚರ್ ಮಿನಿಸ್ಟರ್‌ರವರೆ ನಾಳೆ ಒಂದು ಸ್ಟೇಟ್‌ಮೆಂಟ್ ಅನ್ನು ಮಾಡಿ.

ಶ್ರೀ ಸಿ. ಬೈರೇಗೌಡ : ಕೇಂದ್ರ ಸರ್ಕಾರದ ನೀತಿಯಿಂದಾದರೂ ಗೊಬ್ಬರ ಸಿಕ್ಕಬೇಕಲ್ಲಾ ಅದು ಕೂಡ ಇವತ್ತು ಸಿಗುತ್ತಾ ಇಲ್ಲ.

ಶ್ರೀ ಎನ್. ಚಿಕ್ಕೇಗೌಡ : ಆಗಬಹುದು.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಎರಡು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ಟೆಲಿಫೋನ್ ಕದ್ದಾಲಿಕೆಯ ಪ್ರಕರಣದಲ್ಲಿ ವಿರೋಧ ಪಕ್ಷದ ನಾಯಕರು ಹೇಳುವಾಗ ನನಗೆ ಬಂದು ನನ್ನಲ್ಲಿರುವ ವಿವರಗಳು ಏನಾದರೂ

ಇದ್ದರೆ ಕೊಡುತ್ತೇನೆಂದು ಹೇಳಿದರು. ಅವರಲ್ಲಿ ಏನು ವಿವರಗಳು ಇತ್ತು ಅದನ್ನು ನನಗೆ ತೋರಿಸಿದ್ದಾರೆ. ಆ ವಿವರಗಳ ಆಧಾರದ ಮೇಲೆ ನಾನು ತೀರ್ಮಾನ ಮಾಡಬೇಕಾಗಿದೆ. ಆದ್ದರಿಂದ ನನ್ನ ತೀರ್ಮಾನವನ್ನು ನಾನು ತಿಳಿಸುತ್ತೇನೆ. ಎರಡನೆಯದು ಗ್ರಾನೈಟ್ ಕಲ್ಲುಗಳ ವಿಚಾರದ ಬಗ್ಗೆ ಈಗಾಗಲೇ ಮಾನ್ಯ ಸಭಾನಾಯಕರು ಹೇಳಿದ್ದಾರೆ. ಇದು ಆ ಸದನಕ್ಕೂ ಕೂಡ ಅನ್ವಯವಾಗುವುದರಿಂದ, ಆ ಸದನದ ಅಭಿಪ್ರಾಯವನ್ನು ತೆಗೆದುಕೊಂಡು ಅನಂತರ ಎರಡೂ ಸದನಗಳ ವಿಚಾರವನ್ನು ನಾನು ಸಭೆಯ ಮುಂದೆ ನಾವು ಮಂಡಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ರೇಷ್ಮೆ ಗಂಟು ರೋಗದ ಬಗ್ಗೆ ಈಗಾಗಲೇ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ.

ಅಧ್ಯಕ್ಷರು : ನೀವು ನನಗೇನೇ ಅವಕಾಶವನ್ನು ಕೊಡುವುದಿಲ್ಲ. ನನಗೂ ಒಂದು ಅವಕಾಶವನ್ನು ಕೊಡಿ. ಈಗ ನಮ್ಮ ಮಾನ್ಯ ಮಹಿಳಾ ಸದಸ್ಯರೊಬ್ಬರು ನನಗೆ ಒಂದು ವಿನಂತಿಯನ್ನು ಕಳುಹಿಸಿಕೊಟ್ಟಿದ್ದಾರೆ. ಅದೇನೆಂದರೆ ಹೆಣ್ಣು ಮಕ್ಕಳ ಗೌರಿಹಬ್ಬಕ್ಕೆ ನೀವು ಸಹಾಯ ಮಾಡಬೇಕೆಂದು ಕಳುಹಿಸಿಕೊಟ್ಟಿದ್ದಾರೆ. ಆ ಹೆಣ್ಣು ಮಕ್ಕಳ ಜೊತೆಯಲ್ಲಿ ಈಶ್ವರಪ್ಪನವರು ಸೇರಿದ್ದಾರೆ. ಇದನ್ನು ಈ ದಿವಸ ಸದನದ ಕಾರ್ಯಕಲಾಪಗಳ ಸಮಿತಿಯ ಸಭೆಯನ್ನು 4.30 ಗಂಟೆಗೆ ಕರೆದಿದ್ದೇನೆ. ಆ ಸಮಿತಿಯ ಮುಂದೆ ಇದನ್ನು ಇಟ್ಟು ಅನಂತರ ತೀರ್ಮಾನವನ್ನು ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ರೇಷ್ಮೆ ಹುಳುವಿನ ಬಗ್ಗೆ...

ಅಧ್ಯಕ್ಷರು : ಇದರ ಬಗ್ಗೆ ನಾಳೆಗೆ ಅಲ್ಪಕಾಲಾವಧಿ ಚರ್ಚೆಗೆ ಹಾಕಿಕೊಂಡಿದ್ದೇನೆ.

ಶ್ರೀ ಸಿ. ಬೈರೇಗೌಡ : ನಿನ್ನೆ ದಿವಸ ತಮ್ಮನ್ನು ನಾನು ಭೇಟಿಯಾದಾಗ..

ಅಧ್ಯಕ್ಷರು : 11ನೇ ತಾರೀಖು ಎಂದು ಕೇಳಿ ನಾನು ಗುರ್ತಿಸಿದ್ದೇನೆ.

ಶ್ರೀ ಜಿ. ರಾಜೂಗೌಡ : ಸ್ವಾಮಿ ಪ್ರವಾಹದ ಬಗ್ಗೆ ಚರ್ಚೆ ಮಾಡಬೇಕು.

ಅಧ್ಯಕ್ಷರು : ಆ ಚರ್ಚೆಯು ಮುಂದುವರಿಯುತ್ತಾ ಇದೆ. ಚರ್ಚೆ ಅಪೂರ್ಣವಾಗಿದೆ ಅದನ್ನು ಪೂರ್ಣಗೊಳಿಸೋಣ.

ಶ್ರೀಮತಿ ಮೋಟಮ್ಮ : ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದು.

Dr. Jeevaraj Alva : ಮಾನ್ಯ ಅಧ್ಯಕ್ಷರೇ, ಒಂದು ಸಲಹೆ, 26-8-1991ರಿಂದ ಅಸೆಂಬ್ಲಿ ನಡೆಯುತ್ತಿದ್ದು, ಇಲ್ಲಿಯವರೆಗೆ ಎರಡು ಬೇಡಿಕೆಗಳ ಬಗ್ಗೆ ಮಾತ್ರ ಚರ್ಚೆಯಾಗಿದೆ. ಇನ್ನುಳಿದ 32 ಮಂತ್ರಿಗಳ ಡಿಮ್ಯಾಂಡ್ ಚರ್ಚೆಯಾಗಬೇಕಾಗಿದೆ.

The thrust of the Current session is the discusssion on these demands eminating from the Budget Speech of the Chief Minister. ಆದ್ದರಿಂದ ಏನು ಉಪಯೋಗ ಬರುತ್ತಿದೆ ಎನ್ನುವ ಒಂದೇ ಒಂದು ಕಾರಣದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಲಘುವಾಗಿ ಈ ಮಾತನ್ನು ನಾನು ಹೇಳುತ್ತಿಲ್ಲ. Government is a continuing body. Irrespective of Whoever is the Chief Minister, whichever the party is there and whatever the policies taken up by the previous government they are continued by the successive governments. ಆದರೆ ಇಲ್ಲಿ ಕೇವಲ 18 ತಿಂಗಳುಗಳ ಅಂತರದಲ್ಲಿ ಒಂದೇ ಒಂದು ಸರ್ಕಾರದ ಎರಡು

ಮುಖ್ಯಮಂತ್ರಿಗಳು, ಎರಡು ನಾಯಕರು ಬಂದಿದ್ದಾರೆ. ಒಂದು ಬಜೆಟ್ ಸ್ಪೀಚ್ ಆಯಿತು. ಆ ಬಜೆಟ್ ಸ್ಪೀಚ್ ಬಗ್ಗೆ ನಮ್ಮಲ್ಲಿ ಬಹಳ ದೊಡ್ಡ, ಭೀಕರವಾದ ಭಾಷಣವಾಯಿತು, ಬಹಳ ಸಲಹೆಗಳನ್ನು ಕೊಟ್ಟು, ಕಳಿದ ಬಜೆಟ್‌ನಲ್ಲಿ

What is the vacuum that we have created?

The very relevence of the discussion-it should not be an intellectual exercise, it should not be to see our names in tomorrow's papers that we are deliberating here. What is happening. ಇವತ್ತು ಶ್ರೀ ರಾಜಶೇಖರ ಮೂರ್ತಿಯವರ ದೊಡ್ಡ ಬಜೆಟ್ ಭಾಷಣವಾಯಿತು. ಏನು ಹೇಳುತ್ತಾರೆ ಸ್ಪೀಚ್‌ನಲ್ಲಿ ಎಂದರೆ,

He mentions about the Gas Thermal projects which were to be used for the production of sponges and generation of 1000 MW Gas, based on power. ಇನ್ನೊಂದು ಕಥೆ ಹೇಳುತ್ತಾರೆ. Efforts were also promised for ensuring a better return on the investment of almost four thousand..

4100 ಕೋಟಿ ರೂ. ಗಳನ್ನು ಇನ್‌ವೆಸ್ಟ್ ಮಾಡಿರುವುದನ್ನು ನಾನು ಕೊಡುತ್ತೇನೆ ಎಂದು ಹೇಳಿದ್ದರು

(ಗೊಂದಲ)

I am arriving at it

Dr. Jeevaraj Alva: Rs, 4,100 crores invested..

Sri. S. Bangarappa: I don't want to come in your way. Under what provisions you are raising this issue?

Dr. Jeevaraj Alva: Zero Hour.

(Interruptions)

Sri. S. Bangarappa: Zero Hour..

(Interruptions)

Dr. Jeevaraj Alva: With all humility at my command..

Sri. S. Bangarappa: I am Sorry. I don't think all these things can go on record.

(Interruptions)

Dr. Jeevaraj Alva : With all my humility at my command. there are very rare occasions when I tried to catch your eye.

Mr. Speaker: That is why you have caught my eyes.

(Interruptions)

Sri. S. Bangarappa: No, no. Under what rule the Hon'ble Member is raising the issue? You cannot take the House to ransom. Under what rules?

(Interruptions)

Dr. Jeevaraj Alva: I have been here for 4 consecutive terms. I have to convey something that your failure as the leader..

(Interruptions)

Sri. S. Bangarappa : No,no. You cannot take up that matter..

(Interruptions)

Dr. Jeevaraj Alva: If you provoke me on every subject.....

(Interruptions)

Dr. Jeevaraj Alva: I will speak here...

(Interruptions)

Mr. Speaker: Dr. Alva... Order, order, order..

(Interruptions)

Dr. Jeevaraj Alva: with all humility I am appealing to you. This is a suggestion I am submitting to the Chair..

(Interruptions)

Mr. Speaker: I have heard you.

Dr.Jeevaraj Alva: For the first time I am trying to catch the eye. I am trying to convince certain things. I have been a Member of this House for four Consecutive terms.

Sri. S. Bangarappa : I am on a point of Order. ಮಾನ್ಯ ಸದಸ್ಯರು ಯಾವ ರೂಲ್ ಪ್ರಕಾರ ಈ ಸಬ್‌ಜೆಕ್ಟ್‌ನ್ನು ಈ ಸಂದರ್ಭದಲ್ಲಿ ಎತ್ತುತ್ತಿದ್ದಾರೆ. ಅವರು ವಿಷಯವನ್ನು ಎತ್ತಬಾರದು ಎಂದಲ್ಲ. ಕಾನೂನಿನ ಪ್ರಕಾರ, ನಿಯಮಗಳ ಪ್ರಕಾರ ಅವರು ವಿಷಯಗಳನ್ನು ಎತ್ತುವುದಕ್ಕೆ ಅವರಿಗೆ ಹಕ್ಕು ಇದೆ. ಹಾಗೇನಾದರೂ ವಿಷಯವಿದ್ದರೆ, ಮಾನ್ಯ ಅಧ್ಯಕ್ಷರೆ, ತಮ್ಮ ಗಮನವನ್ನು ಸೆಳೆದು ತಮ್ಮ ಒಪ್ಪಿಗೆಯನ್ನು ಪಡೆದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಇದ್ದರೆ ಇವರು ಹಿರಿಯ ಸದಸ್ಯರಾಗಿದ್ದಾರೆ, ಇವರಿಗೆ ನಿಯಮಗಳ ಪರಿಚಯ ಅಪಾರ ಮತ್ತು ಅಗಾಧವಾಗಿದೆ ಎನ್ನುವ ಹಿನ್ನಲೆಯಲ್ಲಿ ನಾನು ಈ ಮಾತನ್ನು ಆಡುತ್ತಿದ್ದೇನೆ.

ಯಾವ ನಿಯಮಾವಳಿ ಮತ್ತು ರೂಲ್ ಪ್ರಕಾರ ವಿಚಾರ ಎತ್ತಿದ್ದೀರಿ. ಅದನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ಮತ್ತು ಸದನದ ಮೂಲಕ ತಾವು ತಂದು ಪ್ರಸ್ತಾಪ ಮಾಡಿ, ಅವರ ಅನುಮತಿ ಪಡೆದು ಪ್ರಸ್ತಾಪ ಮಾಡಿದರೆ, we have no objection. ಅದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಯಾವ ವಿಚಾರ? ಏನೆಂದು ಗೊತ್ತಿಲ್ಲ. ಸರ್ಕಾರ ಏನು ಉತ್ತರ ಕೊಡಬೇಕೆಂತಲೂ ಗೊತ್ತಾಗುತ್ತಿಲ್ಲ. ಏಕೆಂದರೆ,ಸಡನ್ ಆಗಿ ವಿಚಾರ ಎತ್ತಿ, ಏನು ವಿಚಾರ ಎನ್ನತಕ್ಕಂಥಾದ್ದು ಗೊತ್ತಾಗುವುದಿಲ್ಲ. ಮಾನ್ಯ ಆಳ್ವರವರು ಹಿರಿಯ ಸದಸ್ಯರಾಗಿದ್ದೀರಿ, ತಾವು ಕೂಡಾ ವಿಚಾರದ ಬಗ್ಗೆ ಗಮನಹರಿಸಿ, ನಿಯಮಾವಳಿಕಡೆ ಗಮನವಿರಲಿ. ನೋಡದೆ ವಿಚಾರ ಪ್ರಸ್ತಾಪ ಮಾಡತಕ್ಕಂಥಾದ್ದು ಸಾಧುವಲ್ಲ ಮತ್ತು ಒಳ್ಳೆಯದಲ್ಲ. ಈ ರೀತಿ ಮಾಡುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ, ಇವೊತ್ತು ಅವರು ಇಲ್ಲಿ ಏನು ಹೇಳಿದ್ದಾರೆ, ಅದು ರೆಕಾರ್ಡಿಗೆ ಹೋಗುತ್ತಿದ್ದರೆ, ಏಕೆಂದರೆ ಉತ್ತರ ಕೊಡುತ್ತಿಲ್ಲ, ಅಂಥದಲ್ಲಿ ನಾವು ಹೇಗೆ

ಉತ್ತರ ಕೊಡಬೇಕು. ಆದುದರಿಂದ, ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಹೇಳುವುದ ಮಾತ್ರ ಉಳಿದುಬಿಡುತ್ತದೆ, ನಾಳೆ ಪತ್ರಿಕೆಗೆ ಹೊರಟು ಹೋಗುತ್ತದೆ. ಉತ್ತರ ನಮ್ಮಿಂದ ಬರುವುದಿಲ್ಲವೆಂದರೆ, ಅದು ಉಪಯೋಗಕ್ಕೆ ಬರುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮಾವಳಿಯ ವಿಚಾರದಲ್ಲಿ ಸಂಪೂರ್ಣ ತಿಳುವಳಿಕೆ ಉಳ್ಳವಂತವರು. ತಾವಾದರೂ ಕೂಡ ಈ ವಿಚಾರದ ಬಗ್ಗೆ ಮಾನ್ಯ ಸದಸ್ಯರಿಗೆ ತಿಳುವಳಿಕೆ ತಂದರೆ ಬಹಳ ಉಪಯುಕ್ತವೆಂದು ನಾನು ಭಾವಿಸಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು): ಇಷ್ಟೊಂದು ತಪ್ಪು ತಿಳುವಳಿಕೆ ಏಕಾಯಿತು? ಅವರು ಛೇರ್‌ಗೆ ಸಲಹೆ ಕೊಡುತ್ತೇನೆ ಅಂದರು ಅವರು ಕೊಡಿ ಎಂದು ಹೇಳಿದರು. ಅಧ್ಯಕ್ಷರೆ ಅಪ್ಪಣೆ ಕೊಟ್ಟ ಮೇಲೆ ಇಲ್ಲಿ ನಿಮ್ಮದೇನು ಸ್ವಾಮಿ? ಹೊಳೆ ದಾಟಲಿಕ್ಕೆ ದೊಣ್ಣೆ ನಾಯಕನ ಅಪ್ಪಣೆಯೇ? ತಮ್ಮ ಅಪ್ಪಣೆ ಬೇಕೆ? He did not..

(Interruptions)

ಅಧ್ಯಕ್ಷರು : ಜನರಲ್ ಆಗಿ ಇಂಥಾ ಪ್ರಶ್ನೆಗಳನ್ನು ರೈಸ್ ಮಾಡುವಾಗ ನಡೆದುಕೊಂಡು ಬಂದಿರತಕ್ಕಂಥಾದ್ದು. ಏನೆಂದರೆ, ನೀವು ಬಂದು ನನ್ನನ್ನು ನೋಡಿ, ನಾನು ಇಂಥಾ ವಿಚಾರವನ್ನು ಇವೊತ್ತು ರೈಸ್ ಮಾಡುತ್ತೇನೆಂದು ಹೇಳುತ್ತಾರೆ, ಆಗ ಅದಕ್ಕೆ ನಾವು ಅವಕಾಶ ಕೊಟ್ಟಿರುತ್ತೇವೆ..... ಅಲ್ಲ. ಸಲಹೆ. ತಾವು ಆಪರೇಟಿವ್ ಪಾರ್ಟ್‌ಗೆ ಹೋದರೆ....?

Dr. Jeevaraj Alva: The basic Point I was trying to arrive at was...

ಒಬ್ಬ ಮಾನ್ಯ ಸದಸ್ಯರು : ಸರ್ಕಾರ ಉತ್ತರ ಕೊಡಲಿಕ್ಕೆ ಸಿದ್ಧರಾಗಿರಬೇಕಲ್ಲ.

ಡಾ. ಜೀವರಾಜಆಳ್ವ : ಈಗ ಬಹಳ ಇಶ್ಯೂ ಇದೆ. ನನಗೆ ಕಷ್ಟವಾಗುತ್ತದೆ. ಏಕೆಂದರೆ, they must not ಅವರು ಈಗ ತಮ್ಮ ತಲೆ ಮೇಲೆ ಇದನ್ನು ಹಾಕುವ ಅಗತ್ಯವಿಲ್ಲ. ನಾವೆಲ್ಲಾ ಪಾಲುದಾರರು. Unnecessarily intellectual, futile exercise. ಆಗಿದೆಯೆಂದು ಹೇಳಿದರೆ ನನ್ನನ್ನೇ ನಾನೇ ಟೀಕೆ ಮಾಡುತ್ತಿದ್ದೇನೆ. ತಮ್ಮನ್ನು ಟೀಕೆ ಮಾಡುತ್ತಿದ್ದೇನೆ. ಏಕೆ ಆಗುತ್ತಿಲ್ಲ? ಈಗ ಹಳೆಯ ಬಜೆಟ್ ಸ್ಪೀಚ್ ಮೇಲೆ...

ಶ್ರೀ ಆರ್. ದಯಾನಂದರಾವ್ : ನಾವು ಕೂಡ ಈಗ ಹಳೆಯದೆಲ್ಲವನ್ನೂ ಹೇಳಬೇಕಾಗುತ್ತದೆ.

(ಗೊಂದಲ)

Mr. Speaker: Tell me, Dr. Alva, what is your problem?

(Interruptions)

Mr. Speaker: Order, order, Let me understand his problem.

Dr. Jeevaraj Alva: I have a problem?

Mr. Speaker : What is the problem?

ಡಾ. ಜೀವರಾಜ ಆಳ್ವ : ನಾನು ಎದ್ದ ತಕ್ಷಣ ಇಷ್ಟು ಗಲಾಟೆ ಏತಕ್ಕೆ ಆಗಬೇಕು. ಇವರಿಗೆ ಅಪರೂಪದಲ್ಲಿ ಹೇಳುವುದು. I need your protection. I took twenty minutes..

Mr. Speaker: That should be a grim reminder to you that you should be present here every day. You cannot come here once in a way and go..

Mr. Jeevaraj Alva: It is not that. I am trying to convey.....

Mr. Speaker: That is alright. You please come and discuss with me, then make a submission here.

Mr. Jeevaraj Alva: I am sorry to convey this, that you were very very uncharitable to me. I am trying to convey a very very crucial and vital point to you.

ಶ್ರೀ ಎಸ್. ಬಂಗಾರಪ್ಪ : ತಾವು ಹಿರಿಯ ಸದಸ್ಯರು, ಗೌರವ ಕೊಟ್ಟು ಅವರ ಕೊಠಡಿಗೆ ಹೋಗಿ ಸ್ವಲ್ಪ ಕಾಲ ಕಳೆದು ಮಾತನಾಡಿ ವಿವರಗಳನ್ನು ಪಡೆದುಕೊಂಡು ಬಂದು...

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ಅವರು ಸರ್ಕಾರದ ಮೇಲೆ ಅಲಿಗೇಷನ್ ಮಾಡುತ್ತಿದ್ದಾರೆ.

ಅಧ್ಯಕ್ಷರು: ಅವರು ಆಮೇಲೆ ಇಲ್ಲಿಗೆ ಬಂದು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೇ, ರೇಷ್ಮೆ ಕಂಟ್ರೋಲ್ ಬಗ್ಗೆ ಈ ಸದನ ಪ್ರಾರಂಭವಾದಂದಿನಿಂದ ಕೇಳುತ್ತಿದ್ದೇವೆ. ಬರೀ ನಾಳೆ ಚರ್ಚೆ ನಾಳಿದ್ದು ಚರ್ಚೆ ಎಂದು ಹೋಗುತ್ತಿರುವುದರಿಂದ ದಯಮಾಡಿ ಮುಖ್ಯಮಂತ್ರಿಗಳು ಈ ಬಗ್ಗೆ ಒಂದು ಹೇಳಿಕೆ ಕೊಡಬೇಕು. ರೇಷ್ಮೆ ಕಂಟ್ರೋಲ್ ಬಗ್ಗೆ ಸರ್ಕಾರದ ನಿರ್ಧಾರ ಏನು? ನಿಲುವು ಏನು?

(ಗೊಂದಲ)

ಶ್ರೀ ಸಿ. ಬೈರೇಗೌಡ : ನಾಳೆ ರಜೆ ಕೊಡತಕ್ಕ ಸೂಚನೆ ಇರುವ ಕಾರಣ, ಇದನ್ನು ನಾಳೆ ಚರ್ಚೆ ಮಾಡಲು ಆಗುವುದಿಲ್ಲವಲ್ಲ.

ಅಧ್ಯಕ್ಷರು : ನಾನು ಆಗಲೇ ಹೇಳಿದ್ದೇನೆ.

(ಗೊಂದಲ)

Mr. Speaker: At this rate I will not be able to run the House. I may have to retire.

ನಾನು ರೇಷ್ಮೆ ಬೆಳೆಗಾರರ ವಿಚಾರದಲ್ಲಿ ನಾಳೆ ಅಲ್ಪಾವಧಿಯ ಚರ್ಚೆಗೆ ಅನುಕೂಲ ನೀಡಿದ್ದೇನೆಂದು ಹೇಳಿದರೂ ಕೂಡ ಈಗಲೇ ಚರ್ಚೆ ಮಾಡಿ ಎಂದರೆ...

(ಗೊಂದಲ)

Mr. Speaker: How to run the House? I am very sorry. I need the co-operation from everybody. Otherwise...

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೇ ನಾನು ಸಭೆಯ ನಾಯಕನಾಗಿ ತಮ್ಮ ಗಮನಕ್ಕೆ ತರುವುದೇನೆಂದರೆ, ತಮಗೆ ಸಂಪೂರ್ಣವಾಗಿ ಸಹಕಾರವನ್ನು ಕೊಡತಕ್ಕ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ. ಮಾನ್ಯ ಬೈರೇಗೌಡರೆ

ಅಧ್ಯಕ್ಷರೇ ಮನಸ್ಸಿನ ಯಾತನೆಯನ್ನು ಸ್ವಲ್ಪ ಅರ್ಥಮಾಡಿಕೊಳ್ಳಿ...ಮಾನ್ಯ ಸದಸ್ಯರು ಹೇಳುತ್ತಿರತಕ್ಕ ವಿಚಾರ ಬಹಳ ತೀವ್ರವಾಗಿ ಆಗಬೇಕಾಗಿರುವುದರಿಂದ ಆ ವಿಷಯ ಬೇಗ ಚರ್ಚೆಗೆ ಬರಲಿ ಎನ್ನುವ ದೃಷ್ಟಿಯಿಂದ ಹೇಳಿದ್ದಾರೆಯೇ ಹೊರತು ಬೇರೆ ಯಾವ ರೀತಿಯಲ್ಲಿಯೂ ಹೇಳಲಿಲ್ಲವೆಂದು ಕಾಣುತ್ತಿದೆ. ತಾವು ದಯಮಾಡಿ ನಾಳೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಅದು ನಾಳೆ ಚರ್ಚೆಗೆ ಬರಲಿ, ಸರಕಾರ ಉತ್ತರವನ್ನು ಕೊಡಲು ಸಿದ್ದವಾಗಿದೆ. ಸಭೆಯನ್ನು ನಡೆಸಲು ಸಂಪೂರ್ಣವಾದ ಸಹಕಾರವನ್ನು ನಾವೆಲ್ಲರೂ ಕೊಡುತ್ತೇವೆ. ಮತ್ತೆ ಇದರ ಬಗ್ಗೆ ಏನನ್ನೂ ಹೇಳಬೇಕಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ರಾಜ್ಯದಲ್ಲಿ ಯಾವುದೇ ಕೆಲಸವಾಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ನನಗಾಗಿರುವ ಬೇಜಾರೇನೆಂದರೆ ಅಧಿವೇಶನವು ಪ್ರಾರಂಭವಾಗಿ 15 ದಿನಗಳು ಆದರೂ ಕೂಡ ಒಂದು ಬೇಡಿಕೆಯನ್ನು ಮುಗಿಸಿಲ್ಲವಲ್ಲ?

ಶ್ರೀ ಬಿ.ಎಸ್. ಯಡಿಯೂರಪ್ಪ : ಹಿಂದೆ ಹಲವು ಬಾರಿ ಅನೇಕ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದರೂ ಕೂಡ ಗಮನ ಕೊಡದೇ ಇರತಕ್ಕ ಪರಿಣಾಮ..

(ಗೊಂದಲ)

ಶ್ರೀ ಮಾಟಾಳ್ ನಾಗರಾಜ್: ಅಧ್ಯಕ್ಷರೆ ತಮಗೆ ಏನದಾದರೂ ಮನಸ್ಸಿಗೆ ನೋವಾಗಿದ್ದರೆ, ನಿಮ್ಮಲ್ಲಿ ಒಂದು ಶರತ್ತು ಇಲ್ಲದೆ ಕ್ಷಮಾಪಣೆ ಕೇಳುತ್ತೇವೆ. ನಾವೆಂದೂ ತಮ್ಮ ಮನಸ್ಸನ್ನು ನೋಯಿಸಬೇಕೆಂದು ಇಲ್ಲ.

(ಗೊಂದಲ)

ತಮ್ಮ ಮನಸ್ಸಿಗೆ ನೋವಾಗಿದ್ದರೆ ಅದಕ್ಕೆ ಬಹಿರಂಗವಾಗಿ ಕ್ಷಮೆಯನ್ನು ಕೇಳುತ್ತೇವೆ. ತಮ್ಮ ಮನಸ್ಸನ್ನು ನೋಯಿಸುವ ಉದ್ದೇಶ ನಮ್ಮಲ್ಲಿ ಇಲ್ಲ. ತಮ್ಮ ಮನಸ್ಸನ್ನು ನೋಯಿಸುವ ಯಾವುದೇ ವಿಚಾರವನ್ನು ನಾವು ತರುತ್ತಿಲ್ಲ. ನಾವು ಯಾವುದೇ ವಿಚಾರವನ್ನು ತರಬೇಕಾದರೆ ತಮ್ಮ ಕಾರ್ಯಾಲಯಕ್ಕೆ ಬಂದು ವಿಚಾರ ಮಾಡಿದ್ದೇನೆ. ತಾವು ಇಂಥದ್ದಕ್ಕೆ ನೋವಾಗಿದೆಯೆಂದು ಹೇಳಿದರೆ, ನಾವು ನಿಜವಾಗಿಯೂ ಬಹಿರಂಗವಾಗಿ ಕ್ಷಮೆ ಕೇಳುತ್ತೇನೆ.

ಅಧ್ಯಕ್ಷರು : ನೋವಿನ ಪ್ರಶ್ನೆ ಅಲ್ಲ. ಈಗ ನಮ್ಮ ಸದನವು ಸರಿಯಾಗಿ..Let us put the House back on the rails. My immediate concern is, we have got to give serious attention to the demands which have to be voted by this August House. So, I want the cooperation of all the Members in pursuing this withous any distractions.

ಶ್ರೀ ಸಿ. ಬೈರೇಗೌಡ : ತಮ್ಮಲ್ಲಿ ಒಂದು ನಿವೇದನೆ ಅಧ್ಯಕ್ಷರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ ನಮ್ಮ ವರ್ತನೆಯಿಂದ ತಮಗೆ ಬೇಜಾರಾಗಿದ್ದರೆ ನಾವು ಬಹಿರಂಗವಾಗಿ ಕ್ಷಮಾಪಣೆಯನ್ನು ಕೇಳುತ್ತೇವೆ. ನಮಗೆ ಯಾವ ರೀತಿಯಾದ ಬೇಜಾರನ್ನು, ಮನಸ್ಸಿಗೆ ನೋವನ್ನು ಉಂಟು ಮಾಡಬೇಕೆಂದಿಲ್ಲ.

2.10 ಪಿ.ಎಂ

ಸಭಾಧ್ಯಕ್ಷರು : ನೀವು ಬೇಗ ಮುಗಿಸಬೇಕು. ಏಕೆಂದರೆ ಈ ಡಿಮ್ಯಾಂಡ್ ಮುಗಿದು ಮತ್ತೊಂದು ಬೇಡಿಕೆಯನ್ನು ನಾವು ಇವತ್ತು ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ.